**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 3520/2021**

| | | | |
|---|---|---|---|
| **ಹೆಸರು** | **:** | **ಚಂದ್ರಕಾಂತ ವಾಟೀಲ** | **ಚಾ.ಸಾ. 1** |
| **ತಂದೆಯ ಹೆಸರು** | **:** | **ಗುರುವಾದಪ್ಪ** | **ಪ್ರಾ.ಸಾ. 2** |
| **ವಯಸ್ಸು** | **:** | **52 ವರ್ಷ** | **ದಿನಾಂಕಃ 02-09-2024.** |
| **ಉದ್ಯೋಗ** | **:** | **CAO, ಪುರಸಭೆ** | |
| **ವಾಸಸ್ಥಳ** | **:** | **ವಾಡಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

2021 ರಲಿ ಸೆಕ್ಟರ ಮ್ಯಾಜಿಸ್ಟ್ರೇಟ ಕೋವಿಡ-19 ಎಂದು ಚಿಂಚೋಳಿಯಲ್ಲಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 11-05-2021 ರಂದು ನಾನು ಮತ್ತು ನನ್ನ ಸಿಬ್ಬಂದಿಯಾದ ಚಾಸಾ 4 ರಿಂದ 6 ರವರು ಒಂದು ಟೀಂ ಮಾಡಿ ಪ್ರತಿಯೊಂದು ವಾರ್ಡಿನಲ್ಲಿ ಗಸ್ತು ಕರ್ತವ್ಯದಲ್ಲಿದಾಗ ಚಂದಾಪುರದ ಗಾಂದಿ ಚೌಕಿನಲ್ಲಿ ಬೆಳಿಗ್ಗೆ 10 ಗಂಟೆಗೆ ಮುನ್ನಾ ಚಹಾ ಹೋಟೆಲ ತೆರೆದಿರುವುದಾಗಿ ಕಂಡುಬಂದಿತ್ತು. ಸದರಿ ಹೋಟೆಲನಲ್ಲಿ ಸೈಯ್ಯದ ಖಾಜಾ ಎಂಬ ವ್ಯಕ್ತಿ ಇದ್ದರು. ಸದರಿ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಆಗಿರುತ್ತಾನೆ. ಆಗ ನಾವು ಆರೋಪಿಗೆ ಕೋವಿಡ ಕಾಯಿಲೆ ಹರಡುವ ಹಿನ್ನೆಲೆಯಲ್ಲಿ ತನ್ನ ಅಂಗಡಿಯನ್ನು ಮುಚ್ಚಲು ಹೇಳಿದಾಗ ಸದರಿ ಆರೋಪಿ ಕದ್ದುಮುಚ್ಚಿ ತನ್ನ ಅಂಗಡಿಯಲ್ಲಿ ಚಹಾ ಮಾರಾಟ ಮಾಡುತ್ತಿರುತ್ತಾನೆ. ಆದ್ದರಿಂದ ದಿನಾಂಕಃ 11-05-2021 ರಂದು ಮಧ್ಯಾಹ್ನ 3 ರಿಂದ 4 ಗಂಟೆ ಸುಮಾರಿಗೆ ಚಿಂಚೋಳಿ ಪೋಲಿಸ ಠಾಣೆಗೆ ಹೋಗಿ ಆರೋಪಿ ವಿರುದ್ದ ದೂರನ್ನು ನೀಡಿದ್ದೇನೆ. ಆ ಕಾಲಕ್ಕೆ ನನ್ನ ಜೊತೆ ನನ್ನ ಸಿಬ್ಬಂದಿಯಾದ ಚಾಸಾ 4 ರಿಂದ 6 ರವರು ಸಹ ಇದ್ದರು. ಸ್ಥಳದಲ್ಲಿ ಬೇರೆ ಯಾರು ಇದ್ದರು ಎಂದು ನಾನು ಅಷ್ಟೊಂದು ಗಮನಿಸಿಲ್ಲ. ನಾನು ಸಲ್ಲಿಸಿರುವ ದೂರನ್ನು ಈಗ ನೋಡುತಿದ್ದು ಅದನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಮರುದಿನ ಮದಾಹ್ನ 12 ರಿಂದ 1 ಗಂಟೆ ಸುಮಾರಿಗೆ ಚಾಸಾ 12 ರವರು ಸದರಿ ಚಹಾ ಅಂಗಡಿ ಮುಂದೆ ಬಂದು ಪಂಚನಾಮೆ ಮಾಡಿದಾಗ ಆ ಸಮಯಕ್ಕೆ ನಮ್ಮ ಸಿಬ್ಬಂದಿ ಸಹ ಇದ್ದರು. ಈಗ ನೋಡುತ್ತಿರುವ ನಿಪಿ2 ರ ಭಾವಚಿತ್ರ ಪಂಚನಾಮೆ ಕಾಲಕ್ಕೆ ಪಡೆಯಲಾಗಿದೆ. ದಿನಾಂಕಃ 13-05-2021 ರಂದು ಕೆಲವೊಂದು ವಿಷಯ ನಾನು ಪೋಲಿಸರಿಗೆ ತಿಳಿಸದೇ ಇರುವ ಕಾರಣ ಮತ್ತೊಂದು ಬಾರಿ ಹೇಳಿಕೆ ನೀಡಿದ್ದೇನೆ. ಈಗ ನೋಡುತ್ತಿರುವ ದಾಖಲೆಗಳನ್ನು ನಾನು ಪೋಲಿಸರಿಗೆ ನೀಡಿದ್ದೇನೆ. ಅವುಗಳಲ್ಲಿ ದಿನಾಂಕಃ 30-05-2021 ರ

ಪತ್ರವನು ನಿಪಿ-4 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-4(ಎ) ಎಂದು , ದಿನಾಂಕಃ 20-02-2021 ರ ಸುತ್ತೋಲೆಯನ್ನು ನಿಪಿ-5 ಎಂದು, ದಿನಾಂಕಃ 03-03-2021 ರ ಸುತ್ತೋಲೆಯನ್ನು ನಿಪಿ-6 ಎಂದು, ದಿನಾಂಕಃ 12-03-2021 ರ ಸುತ್ತೋಲೆಯನ್ನು ನಿಪಿ-7 ಎಂದು, ದಿನಾಂಕಃ 14-03-2020 ರ ಪತ್ರವನ್ನು ನಿಪಿ-8 ಎಂದು, ದಿನಾಂಕಃ 24-03-2021 ರ ಅಧಿಸೂಚನೆಯನ್ನು ನಿಪಿ-9 ಎಂದು, ದಿನಾಂಕಃ 02-04-2021 ರ ಆದೇಶವನ್ನು ನಿಪಿ-10 ಎಂದು, ದಿನಾಂಕಃ 08-04-2015 ರ ಪತವನ್ನು ನಿಪಿ-11 ಎಂದು, ದಿನಾಂಕಃ 16-04-2021 ರ ಆದೇಶವನ್ನು ನಿಪಿ-12 ಎಂದು, ದಿನಾಂಕಃ 17-04-2021 ರ ಪತ್ರವನ್ನು ನಿಪಿ-13 ಎಂದು, ದಿನಾಂಕಃ 19-04-2021 ರ ಪತ್ರವನು ನಿಪಿ-14 ಎಂದು, ದಿನಾಂಕಃ 19-04-2021 ರ ಸಾರ್ವಜನಿಕ ಪ್ರಕರಣೆಯನ್ನು ನಿಪಿ-15 ಎಂದು, ದಿನಾಂಕಃ 20-04-2021 ರ ಆದೇಶವನ್ನು ನಿಪಿ-16 ಎಂದು, ದಿನಾಂಕಃ 21-04-2021 ರ ಆದೇಶವನ್ನು ನಿಪಿ-17 ಎಂದು, ದಿನಾಂಕಃ 21-04-2021 ರ ಆದೇಶವನ್ನು ನಿಪಿ-18 ಎಂದು, ದಿನಾಂಕಃ 21-04-2021 ರ ಸುತೊತಲೆಯನ್ನು ನಿಪಿ-19 ಎಂದು, ದಿನಾಂಕ 22-04-2021 ರ ಸುತ್ತೋಲೆಯನ್ನು ನಿಪಿ-20 ಎಂದು, ದಿನಾಂಕಃ 26-04-2021 ರ ಆದೇಶವನ್ನು ನಿಪಿ-21 ಎಂದು, ದಿನಾಂಕಃ 26-04-2021 ರ ಅಧಿಸೂಚನೆಯನ್ನು ನಿಪಿ-22 ಎಂದು, ದಿನಾಂಕಃ 28-04-2021 ರ ಕಾರ್ಯಲಯ ಆದೇಶವನ್ನು ನಿಪಿ-23 ಎಂದು, ದಿನಾಂಕಃ 01-05-2021 ರ ಆದೇಶವನ್ನು ನಿಪಿ-24 ಎಂದು, ದಿನಾಂಕಃ 07-05-2021 ರ ಆದೇಶವನ್ನು ನಿಪಿ-25 ಎಂದು, ದಿನಾಂಕಃ 08-05-2021 ರ ಆದೇಶವನ್ನು ನಿಪಿ-26 ಎಂದು, ದಿನಾಂಕಃ 10-05-2021 ರ ಸುತ್ತೋಲೆಯನ್ನು ನಿಪಿ-27 ಎಂದು ಮತ್ತು ದಿನಾಂಕಃ 13-05-2021 ರ ಜ್ಞಾಪನ ಪತ್ರವನ್ನು ನಿಪಿ-28 ಎಂದು ಮತ್ತು ದಿನಾಂಕಃ 12-05-2021 ರ ಸುತೋಲೆಯನ್ನು ನಿಪಿ-29 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ SAS ವಕೀಲರು ಯಾವುದೇ ಕಾರಣವಿಲ್ಲದೇ ಸಮಯ ಕೋರಿದ್ದರಿಂದ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**